

## ಕೆನ್ನೇರಳೆಯ ಜಾವಾ ರಾಣಿ

ದಾರಿಬದಿಯಲ್ಲಿ ನೆರಳಿಗಾಗಿ ನೆಡುವ ಆಲಂಕಾರಿಕ ಮರಗಳಲ್ಲಿ ಜಾವಾ ರಾಣಿಯೂ ಒಂದು. ಕೆನ್ನೇರಳೆ ಅಥವಾ ಕೆಂಗುಲಾಬಿ ಬಣ್ಣಗಳಲ್ಲಿ ಅರಳುವ ಈ ಮರದ ಹೂವುಗಳು ನೋಡಲು ಮನೋಹರವಾಗಿರುತ್ತವೆ. ಕ್ಯಾಸಿಯಾ ಜಾವಾನಿಕಾ, ಪಿಂಕ್ ಶವರ್ ಟ್ರೀ ಅಥವಾ ಜಾವಾ ಕ್ಯಾಸಿಯಾ ಎಂದೂ ಈ ಮರವನ್ನು ಕರೆಯಲಾಗುತ್ತದೆ. ಮೆಕ್ಸಿಕೊದಲ್ಲಿ ಜನಿಸಿದರೂ ಇದು ಭಾರತದ ಹವಾಗುಣಕ್ಕೆ ಅದ್ಭುತವಾಗಿ ಒಗ್ಗಿಕೊಂಡಿದೆ. ಹುರಿದ ಅವಲಕ್ಕಿಯಂತೆ ಕಾಣುವ ಹೂವುದಳಗಳು ಬಣ್ಣದ ಚಿಟ್ಟೆಯನ್ನೂ ಹೋಲುತ್ತವೆ. ಹೂವು ಅರಳಿದರೆ ಇದು ದೊಡ್ಡ ಮಂಜರಿಯಾಗಿ, ಗೊಂಪೆಯಾಗಿ, ಇಳಿಬೀಳುವ ಬಿಳಲುಗಳಂತೆ ತೇಲಿಬಿಡುವ ಸಮೂಹಗಳಲ್ಲಿ ಅರಳುತ್ತದೆ. ಹತ್ತಿಪ್ಪತ್ತು ಮೀಟರುಗಳ ಎತ್ತರಕ್ಕೆ ವಿಶಾಲವಾದ ಹರವಿನೊಂದಿಗೆ ವ್ಯಾಪಿಸಿಕೊಳ್ಳುವ ಈ ಮರವು ಉದ್ಯಾನಗಳಿಗೂ ಹೇಳಿ ಮಾಡಿಸಿದ್ದುದು.

ಗೊಬ್ಬರದ ಮರ ಅಥವಾ ಗ್ಲೈರಿಸೀಡಿಯ ಎಂದು ಕರೆಯಲ್ಪಡುವ ಮರಕ್ಕೆ ಬಹಳ ಸಾಮೀಪ್ಯತೆ ಜಾವಾರಾಣಿಗಿದೆ. ಹೂವು, ಎಲೆಗಳ ಆಕಾರ ಒಂದೇ ತೆರನಾದುದು. ಜಾವಾರಾಣಿಯದ್ದು ಕಡುಕಂದು ಬಣ್ಣದ ಅಥವಾ ಕಪ್ಪನೆಯ ಟೊಂಗೆಗಳು. ಥಾಯ್ಲೆಂಡ್‌ನಲ್ಲಿ ಜಾವಾ ರಾಣಿಯನ್ನು ಒಂಬತ್ತು ಮಂಗಳಕರ ಮರಗಳಲ್ಲಿ ಒಂದೆಂದು ಪರಿಗಣಿಸಲಾಗುತ್ತದೆ. ಅದೃಷ್ಟ ತರುವ, ಉನ್ನತ ಶ್ರೇಣಿಯನ್ನು ಕೊಟ್ಟು ವಿಜಯವನ್ನು ದಕ್ಕಿಸಿಕೊಡುವ ಮರವೆಂದು ಇದನ್ನು ಇಲ್ಲಿ ನಂಬಲಾಗಿದೆ. ಫಿಲಿಪೈನ್ಸ್‌ನ ಸ್ಥಳೀಯ ಜಾತಿಯಾದ ಕ್ಯಾಸಿಯಾ ಜಾವಾನಿಕಾದ ಉಪಜಾತಿ ಪ್ಯೂಬಿಫ್ಲೋರಾವನ್ನು ಅಲ್ಲಿನ ಬಲಯೋಂಗ್ ಹಬ್ಬದ ಸಮಯದಲ್ಲಿ ಪೂಜಿಸಲಾಗುತ್ತದೆ. ಹೂವು ಕಾಯಿಕಟ್ಟಿ ಉದ್ದನೆಯ ಕೋಡುಗಳು ಸ್ಫುರಿಸುತ್ತವೆ. ಕೊಳವೆಯಾಕಾರದ ಕೋಡುಗಳು ಬಿಲ್ಲೆ ನಾಣ್ಯದಂತಹ ಬೀಜಗಳನ್ನು ಹೊಂದಿರುತ್ತವೆ.

**–ವಿಶ್ವನಾಥ ಭಟ್, ಧಾರವಾಡ**

## 16 ಶತಮಾನದ ವೀರಗಲ್ಲು

ವಿಜಯನಗರ ಜಿಲ್ಲೆ ಕೂಡ್ಲಿಗಿ ಪಟ್ಟಣದ ಹೊಸಪೇಟೆ ರಸ್ತೆಯಲ್ಲಿರುವ ರಾಜೀವ್ ಗಾಂಧಿನಗರದ ಎದುರಿನ ನಿವೇಶನದ ರಸ್ತೆಯ ಪಕ್ಕದಲ್ಲಿರುವ ಅತ್ಯಾಕರ್ಷಕ ವೀರಗಲ್ಲು ಇದಾಗಿದೆ. ರಚನಾಶೈಲಿಯಾಧಾರದ ಮೇಲೆ 16ನೇ ಶತಮಾನಕ್ಕೆ ಸೇರಿದ್ದು ಎಂದು ಹೇಳಬಹುದು. ವೀರನನ್ನು ಎರಡು ಕುದುರೆಗಳ ಮಧ್ಯ ನಿಲ್ಲಿಸಿರುವುದು ಆಕರ್ಷಣೀಯವಾಗಿದೆ. ವೀರನಿಗೆ ಮಹತ್ವವನ್ನು ನೀಡಲು ಗಾತ್ರದಲ್ಲಿ ದೊಡ್ಡದಾಗಿ ಚಿತ್ರಿಸಲಾಗಿದೆ. ಬಲಗೈಯಲ್ಲಿ ಕತ್ತಿಯನ್ನಿಡಿದು ಅದನ್ನು ಮೇಲಕ್ಕೆತ್ತಿ ಹಿಡಿದು ನಿಂತಿರುವುದನ್ನು ನೋಡಿದರೆ ಅದು ಆತನ ಪರಾಕ್ರಮವನ್ನು ಪ್ರದರ್ಶಿಸುತ್ತದೆ. ಅಲಂಕಾರಗೊಂಡ ವೀರನು ತಲೆಯ ಕೂದಲಿಗೆ ಮುಡಿ ಕಟ್ಟಿದ್ದಾನೆ. ಧರಿಸಿದ ಅನೇಕ ವಸ್ತ್ರಾಭರಣಗಳನ್ನು ಮತ್ತು ಎರಡು ಕುದುರೆಗಳನ್ನು ಗಮನಿಸಿದರೆ ಆತನೊಬ್ಬ ಈ ಭಾಗದ ಪ್ರಸಿದ್ಧ ರಾಜವರ್ಗದ ಅಧಿಕಾರಿ ಆಗಿದ್ದನೆಂದು ಭಾವಿಸಬಹುದು. ವೀರಗಲ್ಲಿನ ಸುತ್ತಲೂ ಆಲಂಕಾರಿಕವಾದ ಬಳ್ಳಿಯನ್ನು ಹೊಂದಿರುವ ಪ್ರಭಾವಳಿ ಇದೆ.

**–ಶೇಖರಯ್ಯ ಟಿ.ಎಚ್.ಎಂ., ಗೆದ್ದಲಗಟ್ಟಿ**



